1	2	3
12.	ಚಿಟಗುಪ್ಪ ಪುರಸಭೆ	5-00 ಲಕ್ಷ
13.	ಸೇಡಂ ಪುರಸಭೆ	4-00 ಲಕ್ಷ
14.	ಹಾವೇರಿ ಪುರಸಭೆ	4-00 ಲಕ್ಷ
15.	ಸೊರಬ ಪಟ್ಟಣಪಂಚಾಯತಿ	3-00 ಲಕ್ಷ
16.	ಆಳಂದ ಪುರಸಭೆ	4-00 ಲಕ್ಷ
17.	ಹಾನಗಲ್ ಪುರಸಭೆ	4-00 ಲಕ್ಷ
18.	ಸಾಗರ ಪುರಸಭೆ	4-00 ಲಕ್ಷ
19.	ಶಿಗ್ಗಾಂವ ಪುರಸಭೆ	3-00 ಲಕ್ಷ
20.	ಬೈಲಹೊಂಗಲ ಪುರಸಭೆ	4-00 ಲಕ್ಷ
21.	ಮುಂಡರಗಿ ಪಟ್ಟಣಪಂಚಾಯ್ತಿ	4-00 ಲಕ್ಷ
22.	ಮುಳಗುಂದ ಪಟ್ಟಣಪಂಚಾಯ್ತಿ	4-00 ಲಕ್ಷ
23.	ಶಹಾಪುರ ಪುರಸಭೆ	4-00 ಲಕ್ಷ
24.	ಕುಷ್ಟಗಿ ಪಟ್ಟಣಪಂಚಾಯ್ತಿ	4-00 ಲಕ್ಷ
25.	ಮುದಗಲ್ ಪಟ್ಟಣಪಂಚಾಯ್ತಿ	4-00 ಲಕ್ಷ
26.	ಹೊಸಕೋಟೆ ಪುರಸಭೆ	20-00 ಲಕ್ಷ
27.	ಪಿರಿಯಾಪಟ್ಟಣ ಪಟ್ಟಣಪಂಚಾಯ್ತಿ	10-00 ಲಕ್ಷ
28.	ಚನ್ನಗಿರಿ ಪಟ್ಟಣಪಂಚಾಯ್ತಿ	20-00 ಲಕ್ಷ
29.	ದಾವಣಗೆರೆ ನಗರಸಭೆ	20-00 ಲಕ್ಷ
30.	ಚಿತ್ರದುರ್ಗ ನಗರಸಭೆ	10-00 ಲಕ್ಷ

ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಟ್ಟಿರುವ ಮನೆಗಳನ್ನು ಸಕ್ರಮಗೊಳಿಸಲು ಅವಧಿ ವಿಸ್ತರಣೆ

709 - ಶ್ರೀ ಸಿ.ಆರ್. ಸಗೀರ್ ಅಹಮದ್(ಚಿಕ್ಕಮಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ವಿವಿಧ ನಗರ ಸಭೆ ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿಯೇ?

2. ಈ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ ಹಾಗೂ ಅರ್ಜಿ ನೀಡಲು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತೆ?

3. ಅನೇಕ ಮನೆ ಮಾಲೀಕರು ಅರಿವು ಇಲ್ಲದೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುವುದಿಲ್ಲ, ಹಾಗಿದ್ದಲ್ಲಿ ಮನೆ ಮಾಲೀಕರು ಅರ್ಜಿ ಸಲ್ಲಿಸಲು ಸಮಯವನ್ನು ವಿಸ್ತರಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಬಂದಿದೆ.

2) ಹೌದು. ದಿನಾಂಕ 31-12-95ನ್ನು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು.

3) ಅರ್ಜಿ ಸಲ್ಲಿಸಲು ಸಮಯವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ವಿಶ್ವ ಯೋಜನೆಗೆ ಹಣ

710 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವ ಯೋಜನೆಯಡಿ 1995 -96, 1996-97, 1997-98 ಮತ್ತು 1998-99ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಆ) ವಿಶ್ವ ಯೋಜನೆಯಿಂದ ಗುಡಿ ಕೈಗಾರಿಕೆ ಗ್ರಾಮಾಂತರ ಪ್ರದೇಶದಲ್ಲಿ ಪ್ರಗತಿಯನ್ನು ಸಾಧಿಸಿದೆಯೇ? ಗುರಿ ಮತ್ತು ಸಾಧನೆ ಎಷ್ಟು?

ಇ) ವಿಶ್ವ ಯೋಜನೆಯಡಿಯಲ್ಲಿ ತರಬೇತಿ ಹೊಂದುವವರಿಗೆ ಕೊಡುವ ಸ್ಟೈಫಂಡ್ ಮಿತಿ ಎಷ್ಟು? ಇದನ್ನು ಹೆಚ್ಚು ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು) :

ಅ)

ಕ್ರ. ಸಂ.	ವರ್ಷ	ಒದಗಿಸಿದ ಹಣ		ಖರ್ಚಾದ ಹಣ
		ಮೂಲ ಅಂದಾಜು	ಪರಿಷ್ಕೃತ ಅಂದಾಜು	
1.	1995-96	1535.00	630.00	606.78
2.	1996-97	1112.00	-	715.075
3.	1997-98	655.00	499.00	488.89